ಕರ್ನಾಟಕ ಸರ್ಕಾರ
Government of Karnataka
ರಾಜ್ಯ ಶಿಕ್ಷಣ ಸಂಶೋಧನೆ ಮತ್ತು ತರಬೇತಿ ಇಲಾಖೆ
ಡಿ ಎಸ್ ಇ ಆರ್ ಟಿ DSERT
DEPARTMENT OF STATE EDUCATIONAL RESEARCH AND TRAINING
NO 4. 100 FT RING ROAD, BANASHANKARI 3RD STAGE BENGALURU - 085
Phone : 080 26422372 26422373 26422374 Fax:26422377
Email: dsert.kar@nic.in Website : http://dsert.kar.nic.in

ಸಂಖ್ಯೆ:ಶೈ.ಸ್ಪ./14/2015-16 ದಿನಾಂಕ: 23/02/2016

## ಸಭಾ ನಡಾವಳಿ

ದಿನಾಂಕ: 23/02/2016 ರಂದು ಡಯಟ್ ಚಾಮರಾಜನಗರ ಇಲ್ಲಿ ಶ್ರೀ ಬಸವೇಗೌಡ ಪ್ರಾಂಶುಪಾಲರು ಸಿಟಿಇ ಮೈಸೂರು ರವರ ಅಧ್ಯಕ್ಷತೆಯಲ್ಲಿ ನಡೆದ ಶೈಕ್ಷಣಿಕ ಸ್ಪಂದನ ಕಾರ್ಯಕ್ರಮದಲ್ಲಿ ಕೆಳಕಂಡ ಅಧಿಕಾರಿಗಳು ಹಾಗೂ ಸಿಬ್ಬಂದಿಯವರು ಭಾಗವಹಿಸಿದ್ದು, ಈ ಕೆಳಕಂಡಂತೆ ವಿಭಾಗವಾರು ಕಾರ್ಯಕ್ರಮಗಳ ಪ್ರಗತಿ ಪರಿಶೀಲನೆ ಮಾಡಲಾಯಿತು.

**ಸಭೆಯಲ್ಲಿ ಹಾಜರಿದ್ದವರು:**

| ಕ್ರ.ಸಂ | ಹಸರು ಮತ್ತು ಹುದ್ದೆ |
|---|---|
| 1 | ಶ್ರೀ ಬಸವೇಗೌಡ, ಪ್ರಾಂಶುಪಾಲರು, ಸರ್ಕಾರಿ ಶಿಕ್ಷಕರ ಶಿಕ್ಷಣ ಮಹಾ ವಿದ್ಯಾಲಯ, ಮೈಸೂರು |
| 2 | ಶ್ರೀಮತಿ ಹೆಚ್.ಎನ್.ಗೀತಾಂಬ, ಪ್ರಾಂಶುಪಾಲರು, ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆ, ಚಾಮರಾಜನಗರ |
| 3 | ಶ್ರೀಮತಿ ಎನ್.ಜಲಜಾಕ್ಷಿ, ಉಪನಿರ್ದೇಶಕರು, ಡಿ.ಎಸ್.ಇ.ಆರ್.ಟಿ. ಬೆಂಗಳೂರು |
| 4 | ಶ್ರೀ ಸಿ.ರಂಗಧಾಮಪ್ಪ, ಹಿರಿಯ ಸಹಾಯಕ ನಿರ್ದೇಶಕರು, ಡಿ.ಎಸ್.ಇ.ಆರ್.ಟಿ. ಬೆಂಗಳೂರು |
| 5 | ಶ್ರೀಮತಿ ಕೆ.ಜಿ. ಗೀತಾ, ಹಿರಿಯ ಸಹಾಯಕ ನಿರ್ದೇಶಕರು, ಡಿ.ಎಸ್.ಇ.ಆರ್.ಟಿ. ಬೆಂಗಳೂರು |
| 6 | ಶ್ರೀಮತಿ ಭಾನುಮತಿ, ಹಿರಿಯ ಸಹಾಯಕ ನಿರ್ದೇಶಕರು, ಡಿ.ಎಸ್.ಇ.ಆರ್.ಟಿ. ಬೆಂಗಳೂರು |
| 7 | ಶ್ರೀ ಎಂ.ಹೆಚ್. ಗಂಗಮಾರೇಗೌಡ, ಹಿರಿಯ ಸಹಾಯಕ ನಿರ್ದೇಶಕರು, ಡಿ.ಎಸ್.ಇ.ಆರ್.ಟಿ. ಬೆಂಗಳೂರು |
| 8 | ಶ್ರೀಮತಿ ಎಸ್.ಪುಷ್ಪಾ ಲೈಬ್ರರಿಯನ್, ಡಿ.ಎಸ್.ಇ.ಆರ್.ಟಿ. ಬೆಂಗಳೂರು |
| 9 | ಶ್ರೀ ಎ.ಶ್ರೀಧರ, ಹಿರಿಯ ಸಹಾಯಕ ನಿರ್ದೇಶಕರು, ಡಿ.ಎಸ್.ಇ.ಆರ್.ಟಿ. ಬೆಂಗಳೂರು |
| 10 | ಶ್ರೀಮತಿ ಬಿ.ವಿ. ಲೀಲಾವತಿ, ಶೀಘ್ರ ಲಿಪಿಗಾರರು, ಡಿ.ಎಸ್.ಇ.ಆರ್.ಟಿ. ಬೆಂಗಳೂರು |
| 11 | ಶ್ರೀ ಡಿ.ಎಂ. ಸುಬ್ಬೇಗೌಡ, ಉಪನ್ಯಾಸಕರು, ಸರ್ಕಾರಿ ಶಿಕ್ಷಕರ ಶಿಕ್ಷಣ ಮಹಾ ವಿದ್ಯಾಲಯ, ಮೈಸೂರು |
| 12 | ಶ್ರೀಮತಿ ಆರ್.ಶಾಂತಲಾ, ಹಿರಿಯ ಸಹಾಯಕ ನಿರ್ದೇಶಕರು, ಡಿ.ಎಸ್.ಇ.ಆರ್.ಟಿ. ಬೆಂಗಳೂರು |
| 13 | ಶ್ರೀ ಟಿ.ವಿ. ಸಿದ್ಧರಾಜಾಚಾರಿ, ಹಿರಿಯ ಉಪನ್ಯಾಸಕರು, ಡಯಟ್, ಚಾಮರಾಜನಗರ |
| 14 | ಹೆಚ್.ಎಸ್.ಸಿದ್ಧರಾಜಪ್ಪ, ಉಪನ್ಯಾಸಕರು, ಡಯಟ್, ಚಾಮರಾಜನಗರ |
| 15 | ಶ್ರೀ ಯು.ಆರ್.ಲಿಂಗರಾಜೇಅರಸ್, ಹಿರಿಯ ಉಪನ್ಯಾಸಕರು, ಡಯಟ್, ಚಾಮರಾಜನಗರ |
| 16 | ಶ್ರೀ ಎಂ.ಎಸ್.ಮುರಳೀಧರ, ಉಪನ್ಯಾಸಕರು, ಡಯಟ್, ಚಾಮರಾಜನಗರ |
| 17 | ಶ್ರೀ ಹೆಚ್.ಬಿ. ಶಿವಾನಂದ, ಹಿರಿಯ ಉಪನ್ಯಾಸಕರು, ಡಯಟ್, ಚಾಮರಾಜನಗರ |
| 18 | ಶ್ರೀಮತಿ ಜಿ.ಮನೋಹರಮಣಿ, ಉಪನ್ಯಾಸಕರು, ಡಯಟ್, ಚಾಮರಾಜನಗರ |
| 19 | ಶ್ರೀಮತಿ ಅನ್ನಪೂರ್ಣ, ಉಪನ್ಯಾಸಕರು, ಡಯಟ್, ಚಾಮರಾಜನಗರ |
| 20 | ಶ್ರೀ ಎನ್.ಹನುಮಯ್ಯ, ಉಪನ್ಯಾಸಕರು, ಡಯಟ್, ಚಾಮರಾಜನಗರ |
| 21 | ಶ್ರೀಮತಿ ಡಿ.ಎನ್. ಗೀತಾ, ಉಪನ್ಯಾಸಕರು, ಡಯಟ್, ಚಾಮರಾಜನಗರ |
| 22 | ಶ್ರೀ ಎಸ್.ರಾಮಶೆಟ್ಟಿ, ಉಪನ್ಯಾಸಕರು, ಡಯಟ್, ಚಾಮರಾಜನಗರ |
| 23 | ಶ್ರೀ ವಿ.ನಾಗರಾಜು, ಹಿರಿಯ ಉಪನ್ಯಾಸಕರು, ಡಯಟ್, ಚಾಮರಾಜನಗರ |
| 24 | ಶ್ರೀ ಪಿ.ಅರಸಶೆಟ್ಟಿ, ಉಪನ್ಯಾಸಕರು, ಡಯಟ್, ಚಾಮರಾಜನಗರ |
| 25 | ಶ್ರೀ ಚೆನ್ನಪ್ಪ, ಕ್ಷೇತ್ರ ಸಂಪನ್ಮೂಲ ಸಮನ್ವಯಾಧಿಕಾರಿಗಳು, ಗುಂಡ್ಲುಪೇಟೆ |
| 26 | ಶ್ರೀ ಟಿ.ಜೆ. ಆನಂದ್, ಕ್ಷೇತ್ರ ಸಂಪನ್ಮೂಲ ಸಮನ್ವಯಾಧಿಕಾರಿಗಳು, ಹನೂರು |
| 27 | ಶ್ರೀ ಜೆ. ರಾಜಪ್ಪ, ಕ್ಷೇತ್ರ ಸಂಪನ್ಮೂಲ ಸಮನ್ವಯಾಧಿಕಾರಿಗಳು, ಯಳಂದೂರು |
| 28 | ಶ್ರೀ ಎ.ಎಲ್ ಕೃಷ್ಣಕುಮಾರ್. ಪ್ರಭಾರ ಕ್ಷೇತ್ರ ಸಂಪನ್ಮೂಲ ಸಮನ್ವಯಾಧಿಕಾರಿಗಳು, ಚಾಮರಾಜನಗರ |
| 29 | ಶ್ರೀ ಬಿ.ಎನ್.ನಾಗೇಂದ್ರ, ಕ್ಷೇತ್ರ ಸಂಪನ್ಮೂಲ ಸಮನ್ವಯಾಧಿಕಾರಿಗಳು, ಕೊಳ್ಳೇಗಾಲ |
| 30 | ಶ್ರೀ ಗುರುಲಿಂಗಯ್ಯ, ಜಿಲ್ಲಾ ಯೋಜನಾ ಉಪ ಸಮನ್ವಯಾಧಿಕಾರಿ, ಎಸ್.ಎಸ್.ಎ ಚಾಮರಾಜನಗರ |
| 31 | ಶ್ರೀಮತಿ ಜಿ.ಮಹದೇವಮ್ಮ, ಕ್ಷೇತ್ರ ಶಿಕ್ಷಣಾಧಿಕಾರಿಗಳು, ಸಾ.ಶಿ.ಇ. ಕೊಳ್ಳೇಗಾಲ |
| 32 | ಶ್ರೀಮತಿ ಎಸ್.ಮಮತ, ಉಪನಿರ್ದೇಶಕರು(ಆಡಳಿತ), ಸಾ.ಶಿ.ಇ. ಚಾಮರಾಜನಗರ |
| 33 | ಶ್ರೀ ಜಿ.ತಮ್ಮಯ್ಯ, ವಿಷಯ ಪರಿವೀಕ್ಷಕರು, ಡಿ.ಡಿ.ಪಿ.ಐ. ಕಛೇರಿ, ಚಾಮರಾಜನಗರ |
| 34 | ಶ್ರೀ ಹೆಚ್.ಜಿ.ಸುರೇಶ್, ಉಪನ್ಯಾಸಕರು, ಡಯಟ್, ಚಾಮರಾಜನಗರ |

**ಶ್ರೀ ರಂಗಧಾಮಪ್ಪ ಸಿ, ಹಿ.ಸ.ನಿ. ಡಿ.ಇಡಿ ವಿಭಾಗ:**

- ಆರ್.ಎಫ್.ಡಿ ಅಡಿಯಲ್ಲಿ ಡಿ.ಇಡಿ ಕಾಲೇಜುಗಳ ತಪಾಸಣೆ ಕಾರ್ಯ ಮುಗಿದಿದೆ ಅನುಪಾಲನೆ ಮಾಡುವುದು.

- ಕ್ಷೇತ್ರಶಿಕ್ಷಣಾಧಿಕಾರಿಗಳು/ಬಿಆರ್‌ಸಿಗಳು ಶಾಲೆಗಳಿಗೆ ಭೇಟಿ ನೀಡಿದ ಸಂದರ್ಭದಲ್ಲಿ ಡಿ.ಇಡಿ ಪ್ರಶಿಕ್ಷಣಾರ್ಥಿಗಳು ಮಾಡುವ ಪಾಠವನ್ನು ವೀಕ್ಷಿಸಲು ತಿಳಿಸಲಾಯಿತು.
- ಜಿಲ್ಲೆಯ ಎಲ್ಲಾ ಅನುದಾನರಹಿತ ಡಿ.ಇಡಿ ಕಾಲೇಜುಗಳ ಪ್ರಶಿಕ್ಷಕರ ಪಟ್ಟಿಯನ್ನು ಎನ್‌ಸಿಟಿಇ ನಿಯಮಗಳನುಸಾರ ಡಯಟ್ ಅನುಮೋದನೆ ಮಾಡಲು ತಿಳಿಸಲಾಯಿತು..
- ಟಿಇಟಿ ತರಬೇತಿಯನ್ನು II ನೇ ಡಿ.ಇಡಿ.ಯ ಕಲಿಕೆ ವೇಳೆಯಲ್ಲಿಯೇ ವಿಶೇಷ ತರಬೇತಿ ನೀಡುವಂತೆ ಡಯಟ್ ಕ್ರಮಕೈಗೊಳ್ಳಲು ತಿಳಿಸಲಾಯಿತು.
- ಡಯಟ್ ಜಿಲ್ಲಾ ವಾರ್ಷಿಕ ಶೈಕ್ಷಣಿಕ ವೇಳಾ ಪಟ್ಟಿ ತಯಾರು ಮಾಡಿಲ್ಲ ಮಾಡಲು ಸೂಚಿಸಲಾಯಿತು.
- ಅನುದಾನರಹಿತ ಡಿ.ಇಡಿ ಕಾಲೇಜುಗಳಿಗೆ ಅಭ್ಯಾಸ ಬೋಧನೆಗೆ ಡಿ.ಎಸ್.ಇ.ಆರ್.ಟಿ.ಇಂದ ಒದಗಿಸಿರುವ ಸಂಪನ್ಮೂಲ ಪುಸ್ತಕದ ಸಾಫ್ಟ್ ಕಾಪಿಗಳನ್ನು ನೀಡಿ ಅದರ ಪ್ರಯೋಜನ ಎಲ್ಲಾ ಪ್ರಶಿಕ್ಷಣಾರ್ಥಿಗಳು ಪಡೆಯುವಂತೆ ಡಯಟ್ ಕ್ರಮ ಕೈಗೊಳ್ಳುವುದು.
- ಡಿ.ಇಡಿ ಕಾಲೇಜುಗಳ ಪರೀಕ್ಷಾ ಫಲಿತಾಂಶ ಶೇ.20% ಮಾತ್ರ ಸಾಧನೆಯಾಗಿದ್ದು ಇದು ತೀರಾ ಕಳಪೆ ಫಲಿತಾಂಶವಾಗಿದ್ದು ಹೆಚ್ಚಳಕ್ಕೆ ಡಯಟ್ ತುರ್ತು ಕ್ರಮಕೈಗೊಂಡು ವರದಿ ನೀಡುವುದು.
- ಡಿ.ಪಿಇಡಿ ಕಾಲೇಜುಗಳ ಚಟುವಟಿಕೆಗಳನ್ನು ಮಾಡುತ್ತಿರುವುದರ ಕುರಿತು ತಪಾಸಣೆ ಮಾಡಲು ತಿಳಿಸಲಾಯಿತು.

**ಎನ್‌ಟಿಎಸ್‌ಇ &ಎನ್‌ಎಂಎಂಎಸ್:**

- ಎನ್‌ಟಿಎಸ್‌ಇ ಪರೀಕ್ಷೆಗೆ 1377 ವಿದ್ಯಾರ್ಥಿಗಳು ನೊಂದಾಯಿಸಿಕೊಂಡಿದ್ದು, ಎನ್‌ಎಂಎಂಎಸ್ 2100 ವಿದ್ಯಾರ್ಥಿಗಳು ನೊಂದಾಯಿಸಿಕೊಂಡಿರುತ್ತಾರೆ.
- ಡಯಟ್ ಹಂತದಲ್ಲಿ ನಡೆಯುವ ಮುಖ್ಯ ಶಿಕ್ಷಕರ ಸಭೆಯಲ್ಲಿ ಪರೀಕ್ಷೆ ಬಗ್ಗೆ ಮಾಹಿತಿ ನೀಡುವುದು, ಶಿಕ್ಷಕರಿಗೆ ವಿಶೇಷ ತರಬೇತಿ ಹಮ್ಮಿಕೊಳ್ಳುವುದು. ಡಯಟ್ ಹಂತದಲ್ಲಿ ಈ ಕುರಿತು ಪ್ರಚಾರ ಮಾಡಿ ನೊಂದಣಿ ಸಂಖ್ಯೆ ಹೆಚ್ಚಿಸಲು ತಿಳಿಸಲಾಯಿತು.
- ಎನ್‌ಟಿಎಸ್‌ಇ &ಎನ್‌ಎಂಎಂಎಸ್ ಪರೀಕ್ಷೆಗಳ ಬಗ್ಗೆ ಕೈಗೊಂಡ ಪ್ರಚಾರದ ಬಗ್ಗೆ ಡಯಟ್ ಹಂತದಲ್ಲಿ ದಾಖಲಾತಿ ಇಡಲು ತಿಳಿಸಲಾಗಿದೆ.
- 2014-15ನೇ ಸಾಲಿನಲ್ಲಿ ಎನ್‌ಎಂಎಂಎಸ್ ಪರೀಕ್ಷೆ ತೆಗೆದುಕೊಂಡ ಜಿಲ್ಲೆಯ 25 ವಿದ್ಯಾರ್ಥಿಗಳ ಬ್ಯಾಂಕ್ ಅಕೌಂಟ್ ದಾಖಲಾಗಿರುವುದಿಲ್ಲ ಇದರ ಬಗ್ಗೆ ಕ್ರಮವಹಿಸಲು ತಿಳಿಸಲಾಯಿತು.
- ಎನ್‌ಟಿಎಸ್‌ಇ &ಎನ್‌ಎಂಎಂಎಸ್ ಪರೀಕ್ಷೆಗೆ ಪೂರ್ವ ತಯಾರಿಗೆ ಸಂಬಂಧಿಸಿದಂತೆ ಮಾಹೆವಾರು ವಾರ್ಷಿಕ ಕ್ಯಾಲೆಂಡರ್ ತಯಾರು ಮಾಡಿ ಅದರಂತೆ ಕ್ರಮಕೈಗೊಳ್ಳಲು ತಿಳಿಸಲಾಯಿತು.
- ಎನ್‌ಟಿಎಸ್‌ಇ &ಎನ್‌ಎಂಎಂಎಸ್ ಪರೀಕ್ಷೆ ತೆಗೆದುಕೊಳ್ಳಲು ಮಕ್ಕಳಿಗೆ ಪ್ರೇರಣೆ ನೀಡಲು ಬಿಇಓ/ಬಿಆರ್‌ಸಿಗಳಿಗೆ ಸಹನಿರ್ದೇಶಕರು ಸಿಟಿಇ ಮೈಸೂರು ರವರು ತಿಳಿಸಿದರು.

**ಶ್ರೀಮತಿ ಶಾಂತಲ ಎಸ್. ಹಿ.ಸ.ನಿ. ವಿಜ್ಞಾನ ವಿಭಾಗ:**

- ಡಿಎಸ್‌ಇಆರ್‌ಟಿಯ ಸೂಚನೆಯಂತೆ ಸೂಚಿತ ಕಾಲಾವಧಿಯಲ್ಲಿ ಕಾರ್ಯಕ್ರಮಗಳ ಆಯೋಜನೆಯಾಗಿದೆ. ಹನೂರು, ಕೊಳ್ಳೆಗಾಲ ಹಾಗೂ ಯಳಂದೂರು ಬ್ಲಾಕ್‌ಗಳಲ್ಲಿ ಭಾಗವಹಿಸುವಿಕೆ ತೃಪ್ತಿಕರವಾಗಿದ್ದು, ಚಾಮರಾಜನಗರ ಹಾಗೂ ಗುಂಡ್ಲುಪೇಟೆ ಬ್ಲಾಕ್‌ನಲ್ಲಿ ವಿಜ್ಞಾನ ಕಾರ್ಯಕ್ರಮಗಳ ಭಾಗವಹಿಸುವಿಕೆ ಕಡಿಮೆಯಾಗಿದೆ.
- ವಿಜ್ಞಾನ ಗೋಷ್ಠಿ, ನಾಟಕ, ವಸ್ತುಪ್ರದರ್ಶನ ಕಾರ್ಯಕ್ರಮಗಳನ್ನು ಶಾಲಾ ಹಂತದಲ್ಲಿ ಕಡ್ಡಾಯವಾಗಿ ಕೈಗೊಳ್ಳುವುದು ಇದರಿಂದ ಹೆಚ್ಚು ವಿದ್ಯಾರ್ಥಿಗಳು ಭಾಗವಹಿಸುವ ಅವಕಾಶವಿದ್ದು, ಅರ್ಥ ಪೂರ್ಣವಾಗಿರುತ್ತದೆ. ಡಯಟ್‌ನ ನೋಡಲ್ ಅಧಿಕಾರಿಗಳು ಆಯಾ ಕಾರ್ಯಕ್ರಮಗಳ ಕುರಿತು ಮಾಹಿತಿ/ಪ್ರಚಾರ ನೀಡುವುದರೊಂದಿಗೆ ಇಡೀ ಕಾರ್ಯಕ್ರಮದಲ್ಲಿ ಪೂರ್ಣವಾಗಿ ತೊಡಗುವುದರಿಂದ ಗುಣಮಟ್ಟ ಹೆಚ್ಚಿಸಲು ಅವಕಾಶವಿರುತ್ತದೆ ಎಂದು ತಿಳಿಸಲಾಯಿತು. ಎಲ್ಲಾ ಶಾಲೆಗಳಿಗೆ ಸಾಕಷ್ಟು ಮುಂಚಿತವಾಗಿಯೇ ಮಾಹಿತಿ ನೀಡಲು ಕ್ರಮವಹಿಸಬೇಕು.
- ವಿಜ್ಞಾನ ಚಟುವಟಿಕೆ ಹಾಗೂ ಕಾರ್ಯಕ್ರಮಗಳ ಬಗ್ಗೆ ಮುಖ್ಯ ಶಿಕ್ಷಕರ ಸಭೆಗಳಲ್ಲಿ ಹಾಗೂ ಕಾರ್ಯಕ್ರಮದ ವಾರ್ಷಿಕ ವೇಳಾ ಪಟ್ಟಿ ನೀಡಲು ತಿಳಿಸಲಾಯಿತು .
- ಆಕಾಶವಾಣಿ ಹಾಗೂ ಪತ್ರಿಕೆಗಳ ಮೂಲಕ ಪ್ರಚಾರಕ್ಕೆ ಡಯಟ್ ನೋಡಲ್ ಅಧಿಕಾರಿಗಳು ಕ್ರಮವಹಿಸಲು ತಿಳಿಸಲಾಯಿತು.
- ವಿಜ್ಞಾನ ಕಾರ್ಯಕ್ರಮಗಳಲ್ಲಿ ಭಾಗವಹಿಸಿದ ವಿದ್ಯಾರ್ಥಿಗಳಿಗೆ ಪ್ರಮಾಣ ಪತ್ರ ಹಾಗೂ ಪ್ರಯಾಣ ಭತ್ಯೆ ನೀಡಲು ಅನುವು ಮಾಡಿಕೊಡಲು ಬಿಆರ್‌ಸಿ ರವರು ಕೋರಿರುತ್ತಾರೆ.
- ವಿಜ್ಞಾನ ನಾಟಕ ಸ್ಪರ್ಧೆಯನ್ನು ಒಂದು ದಿನ ಹಮ್ಮಿಕೊಳ್ಳಲು ಸಾಧ್ಯವಾಗುತ್ತಿಲ್ಲವೆಂದು ಬಿಆರ್‌ಸಿ ರವರು ತಿಳಿಸಿದ್ದು, ಇದಕ್ಕೆ ಹೆಚ್ಚಿನ ಸಂಖ್ಯೆಯಲ್ಲಿ ವಿದ್ಯಾರ್ಥಿಗಳು ಭಾಗವಹಿಸುತ್ತಿದ್ದಲ್ಲಿ ಕ್ಲಸ್ಟರ್ ಹಂತದಲ್ಲಿ ಆಯೋಜನೆ ಮಾಡಿ ನಂತರ ಉತ್ತಮ ಸಾಧನೆ ಮಾಡಿದವರನ್ನು ಬ್ಲಾಕ್ ಹಂತದಲ್ಲಿ ಆಯೋಜನೆ ಮಾಡಲು ತಿಳಿಸಲಾಯಿತು.
- ವಿಜ್ಞಾನ ಚಟುವಟಿಕೆ ಹಾಗೂ ಕಾರ್ಯಕ್ರಮಗಳಿಗೆ ಸಂಬಂಧಿಸಿದಂತೆ ಬಿಇಓ/ಬಿಆರ್‌ಸಿ/ಸಿಆರ್‌ಪಿ ಗಳು ಕಾರ್ಯಕ್ರಮದ ಅನುಷ್ಠಾನಕ್ಕೆ ಹೆಚ್ಚು ಒತ್ತು ನೀಡಲು ಉಪನಿರ್ದೇಶಕರು(ಆ) ರವರು ತಿಳಿಸಿದರು.
- ವಿಜ್ಞಾನ ಕೇಂದ್ರಗಳಲ್ಲಿ ಸೂಚಿತ ಕಾರ್ಯಕ್ರಮಗಳು ಪರಿಣಾಮಕಾರಿಯಾಗಿ ಆಯೋಜಿಸಲು ಹಾಗೂ ಸಮುದಾಯ, ಶಿಕ್ಷಕರು ಮಾದರಿ ಕೇಂದ್ರವಾಗಿ ಮಾಡಲು ತಿಳಿಸಲಾಯಿತು ವಿಜ್ಞಾನ ಕೇಂದ್ರಗಳು ಸಮುದಾಯ ಹಾಗೂ ವಿಜ್ಞಾನ ಶಿಕ್ಷಕರು ಬಳಸುವ ಬಗ್ಗೆ ಅರಿವು ಮೂಡಿಸುವುದು.

**ಶ್ರೀಮತಿ ಗೀತಾ.ಕೆ.ಜಿ, ಹಿ.ಸ.ನಿ. ಶೈಕ್ಷಣಿಕ ವೃತ್ತಿ ಮಾರ್ಗದರ್ಶನ/ಆಪ್ತ ಸಲಹಾ ವಿಭಾಗ:**

- ಶೈಕ್ಷಣಿಕ ವೃತ್ತಿ ಮಾರ್ಗದರ್ಶನ ಯೋಜನೆಯಡಿ ರೂ.2,70,000/- ಗಳು ಅನುದಾನ ಬಿಡುಗಡೆಯಾಗಿದ್ದು, ಸರ್ಕಾರಿ/ಅನುದಾನಿತ ಶಾಲೆಗಳಿಗೆ ಕೂಡಲೆ ಬಿಡುಗಡೆ ಮಾಡಲು ತಿಳಿಸಲಾಯಿತು.
- ಎಸ್‌ಎಸ್‌ಎಲ್‌ಸಿ ವಿದ್ಯಾರ್ಥಿಗಳಿಗೆ ವೃತ್ತಿ ಮಾರ್ಗದರ್ಶನದ ಬಗ್ಗೆ ಶಾಲೆಗಳಲ್ಲಿ 10ನೇ ತರಗತಿ ನಂತರ ಉದ್ಯೋಗವಕಾಶಗಳ ಬಗ್ಗೆ ಸೂಕ್ತ ಮಾರ್ಗದರ್ಶನ ನೀಡಲು ತಿಳಿಸಲಾಯಿತು.

- ಡಯಟ್‌ನಲ್ಲಿ ಶೈಕ್ಷಣಿಕ ವೃತ್ತಿ ಮಾರ್ಗದರ್ಶನ/ಆಪ್ತ ಸಲಹಾ ಕೇಂದ್ರಗಳಿಗೆ ನೋಡಲ್ ಅಧಿಕಾರಿಯನ್ನು ನೇಮಕ ಮಾಡಿರುವುದಿಲ್ಲ.
- ವಾರ್ಷಿಕ ಕ್ರಿಯಾ ಯೋಜನೆ ತಯಾರಿಸಿರುವುದಿಲ್ಲ ಡಯಟ್ ಕೂಡಲೇ ಕ್ರಮವಹಿಸಲು ತಿಳಿಸಲಾಯಿತು.
- ಕೌಶಲ ಪುಸ್ತಕ ಸರಬರಾಜಾಗಿದ್ದು, ಶಾಲೆಗಳಿಗೆ ವಿತರಿಸಲಾಗಿದೆಯೇ ಎಂಬುದನ್ನು ಖಾತರಿಪಡಿಸಿಕೊಳ್ಳಲು ತಿಳಿಸಲಾಯಿತು.
- ಸಿಆರ್‌ಟಿ ಯಿಂದ ಶಿಕ್ಷಕರಿಗೆ ನೀಡುವ ತರಬೇತಿಗೆ ಶಿಕ್ಷಕರನ್ನು ನಿಯೋಜನೆ ಮಾಡುವುದು ಹಾಗೂ ತರಬೇತಿ ಪಡೆದ ಶಿಕ್ಷಕರು ಕ್ಷೇತ್ರಗಳಲ್ಲಿ ಅದರ ಉಪಯೋಗವಾಗುತ್ತಿರುವ ಬಗ್ಗೆ ಖಾತ್ರಿಪಡಿಸಿಕೊಳ್ಳುವುದು.

**ಶ್ರೀಮತಿ ಭಾನುಮತಿ ಹಿ.ಸ.ನಿ. ಇಕ್ಯೂಎಂಸಿ ವಿಭಾಗ:**

- 'ಪಢೇ ಭಾರತ್ ಬಢೇ ಭಾರತ್' ಅಡಿಯಲ್ಲಿ ಮಾದರಿ ಶಾಲೆಗಳ ತಾಲ್ಲೂಕುವಾರು ಶಾಲೆ ಆಯ್ಕೆ ಮಾಡಲಾಗಿದೆ ಅದರ ಪ್ರಗತಿ ಬಗ್ಗೆ ಪರಿಶೀಲಿಸಲು ತಿಳಿಸಲಾಯಿತು.
- ಶಾಲಾ ಭೇಟಿ ಸಂದರ್ಭದಲ್ಲಿ ಗಮನಿಸಿದ ನ್ಯೂನ್ಯತೆಗಳನ್ನು ನಿಖರವಾಗಿ ನಮೂದಿಸುವುದು ಹಾಗೂ ಭೇಟಿ ವೇಳೆ ನಮೂನೆಗಳನ್ನು ಉಪಯೋಗಿಸಲು ತಿಳಿಸಲಾಯಿತು.

  **ಕ್ಯೂಎಂಟಿ:**

- ವರದಿ ವಿಶ್ಲೇಷಣೆ ಮಾಡಿ ಸಾಮರ್ಥ್ಯ ಕೊರತೆಯನ್ನು ತರಬೇತಿಯಲ್ಲಿ ಅಳವಡಿಸಿಕೊಳ್ಳಲು ತಿಳಿಸಲಾಯಿತು, ಸಿಆರ್‌ಸಿಗಳಿಗೆ ಸಾಮರ್ಥ್ಯವಾರು ಪಟ್ಟಿ ಮಾಡಿ, ಮಾರ್ಗದರ್ಶನ ಮಾಡಲು ತಿಳಿಸಲಾಯಿತು.
- ಅನುಪಯುಕ್ತ ವಸ್ತುಗಳ ವಿಲೇವಾರಿ: ಶಾಲೆ ಕಛೇರಿಗಳಿಗೆ ಭೇಟಿ ನೀಡಿದ ಸಂದರ್ಭದಲ್ಲಿ ಈ ಬಗ್ಗೆ ಸುತ್ತೋಲೆಯಲ್ಲಿ ತಿಳಿಸಿರುವಂತೆ ಕ್ರಮವಹಿಸಲು ತಿಳಿಸುವುದು ಹಾಗೂ ಜಿಲ್ಲೆಯ ಶಾಲೆಗಳ ಮತ್ತು ಕಛೇರಿಗಳ ಬಗ್ಗೆ ಮೇಲುಸ್ತುವಾರಿ ನಡೆಸಿ ವರದಿ ತರಿಸಲು ಡಯಟ್ ಹಂತದಲ್ಲಿ ನೋಡಲ್ ಅಧಿಕಾರಿಯನ್ನು ನೇಮಿಸಲು ತಿಳಿಸಲಾಯಿತು.
- ಕೆಎಸ್‌ಕ್ಯೂಎಸಿ ಪರೀಕ್ಷೆಗೆ ಸಂಬಂಧಿಸಿದಂತೆ ಸಮಸ್ಯೆ ಇರುವ ಬಗ್ಗೆ ಪ್ರಸ್ತಾಪಿಸಿದರು ಈ ಬಗ್ಗೆ ರಾಜ್ಯ ಕಚೇರಿಗೆ ಪತ್ರ ಬರೆಯಲು ತಿಳಿಸಲಾಯಿತು.

**ಶ್ರೀ. ಗಂಗಮಾರೇಗೌಡ ಹಿ.ಸ.ನಿ. ಎಸ್.ಎಸ್.ಎ ವಿಭಾಗ:**

- ಶಿಕ್ಷಕರ ಅಗತ್ಯತೆಗಳನ್ನು ಗುರುತಿಸಿಕೊಂಡಿರುವುದಿಲ್ಲ.
- ತರಬೇತಿಗಳಿಗೆ ಸಾಹಿತ್ಯವಾಗಲೀ, ಪೂರಕ ಸಾಹಿತ್ಯವಾಗಲೀ ರಚಿಸಿರುವುದಿಲ್ಲ.
- ಶೀಕ್ಷಕರ ಗುರಿ 2590 ಇದ್ದು ಶೇ 81.15 ತರಬೇತಿಯ ಪ್ರಗತಿಯಾಗಿದೆ.
- ಜಿಲ್ಲಾ ಹಂತದಲ್ಲಿ ನೀಡಲಾದ ಸಂಪನ್ಮೂಲ ವ್ಯಕ್ತಿಗಳ ತರಬೇತಿಗಳಲ್ಲಿ ಪೂರ್ವ ಪರೀಕ್ಷೆ ಹಾಗೂ ಸಾಫಲ್ಯ ಪರೀಕ್ಷೆ ಮಾಡಿರುವುದಿಲ್ಲ.
- ಪ್ರತಿ ವಿಷಯದಲ್ಲಿ ಸಂಪನ್ಮೂಲ ವ್ಯಕ್ತಿಗಳ ಪಟ್ಟಿಯನ್ನು ಡಯಟ್‌ನಲ್ಲಿ ನಿರ್ವಹಿಸಬೇಕು.
- ತರಬೇತಿಗಳಿಗೆ ಕನಿಷ್ಠ ಒಂದು ವಾರವಾದರೂ ಮುಂಚಿತವಾಗಿ ಶಿಕ್ಷಕರಿಗೆ ತಿಳಿಸಬೇಕು.
- 2016-17ನೇ ಸಾಲಿಗೆ KSQAAC, NAS, KLAS, ASER ವರದಿಗಳ ಮುಖ್ಯಾಂಶಗಳನ್ನು ಆಧರಿಸಿ Perspective plan ತಯಾರಿಸಲು ತಿಳಿಸಿದೆ.
- ಆಯಾ ಮಾಧ್ಯಮದಲ್ಲಿ ಆಯಾ ತರಬೇತಿ ಸಾಹಿತ್ಯಗಳು ಲಭ್ಯವಾಗುವಂತೆ ಕ್ರಮವಹಿಸಬೇಕು
- ನವಂಬರ್ 2015 ರ ಮಾಹೆಯವರೆಗೆ ಅಧಿಕಾರಿಗಳು ತಮ್ಮ ಟಿಪಿ, ಟಿಡಿಗಳನ್ನು ಕೈನಲ್ಲೇ ಬರೆದು ಸಲ್ಲಿಸುತ್ತಿರುವುದು ಕಂಡುಬರುತ್ತದೆ.
- ಶಿಕ್ಷಕರ ಟಿ.ಪಿ, ಟಿ.ಡಿ ಗಳನ್ನು ಕ್ರಮಬದ್ಧವಾಗಿ ನಿರ್ವಹಿಸಿರುವುದಿಲ್ಲ. ತಿಂಗಳುವಾರು ಅಥವಾ ಅಧಿಕಾರಿವಾರು ಕಡತಗಳನ್ನು ನಿರ್ವಹಿಸಬೇಕು.
- ಶಾಲೆಗಳಿಗೆ ಭೇಟಿ ನೀಡಿದ ಅಧಿಕಾರಿಗಳು ಒಟ್ಟಾರೆಯಾಗಿ ವರದಿಗಳನ್ನು ಬರೆಯುವುದು ಸೂಕ್ತವಲ್ಲ. ಯಾವ ತರಗತಿಯಲ್ಲಿ ಯಾವ ಮಗು ಯಾವ ವಿಷಯದಲ್ಲಿ ಹಿಂದುಳಿದಿದೆ ಎಂಬುದನ್ನು ಸ್ಪಷ್ಟವಾಗಿ ನಮೂದಿಸಬೇಕು.

**ಆರ್.ಎಂ.ಎಸ್.ಎ ವಿಭಾಗ:**

- ಎಸ್.ಟಿ.ಎಫ್ ತರಬೇತಿಗಳು ಶೇ 96 ಪ್ರಗತಿಯಾಗಿರುತ್ತದೆ.
- ವಿಷಯವಾರು ತರಬೇತಿಗಳು ವಿಜ್ಞಾನ ಮಾತ್ರ ಶೇ 46.58 ಇದ್ದು ಉಳಿದ ತರಬೇತಿಗಳ ಪ್ರಗತಿ ಶೇ 90 ದಾಟಿದೆ.
- ಸಾಮಾನ್ಯ ವಿಷಯಗಳಿಗೆ ಸಂಬಂಧಿಸಿದಂತೆ 675 ಗುರಿ ಹೊಂದಿದ್ದು ಇದುವರೆಗೆ 121 ಜನರಿಗೆ ತರಬೇತಿ ಆಗಿದ್ದು ಶೇ 17.92 ಪ್ರಗತಿಯಾಗಿದೆ.
- ದಿನಾಂಕ: 17.02.2016 ರಂದು ಈ ತರಬೇತಿಗಳಿಗಾಗಿ ಡಿ.ಎಸ್.ಇ.ಆರ್.ಟಿ ಯಿಂದ ರೂ. 684600 ಅನುದಾನ ಬಿಡುಗಡೆಯಾಗಿರುತ್ತದೆ.
- ಸಾಮಾನ್ಯ ವಿಷಯಗಳಿಗೆ ಎರಡು ದಿನದ ತರಬೇತಿಗಾಗಿ ಜಿಲ್ಲಾ ಹಂತದಲ್ಲಿ ಸಾಹಿತ್ಯ ರಚಿಸಿಕೊಂಡಿರುತ್ತಾರೆ. ಆದರೆ ಶಿಕ್ಷಕರ ಅಗತ್ಯತೆಗಳನ್ನು ಪಡೆದಿರುವುದಿಲ್ಲ.
- ಎಸ್.ಡಿ.ಎಂ.ಸಿ ತರಬೇತಿಗಳು ಶೇ.100 ಪ್ರಗತಿಯಾಗಿದೆ.

**ಶ್ರೀ ಶ್ರೀಧರ್ .ಎ, ಹಿ.ಸ.ನಿ ಮನೋವಿಜ್ಞಾನ ಪ್ರಯೋಗಾಲಯ:**

- ಈ ವಿಭಾಗದಲ್ಲಿ ಕೆಲಸದ ಹಂಚಿಕೆ ಮಾಡಲಾಗಿದೆ ಈ ವರ್ಷ ಆಯ್ಕೆಯಾದ ಹೊಸ ಶಾಲೆಗಳಿಗೆ ರೂ. 4000/- ಗಳನ್ನು ಬಿಡುಗಡೆ ಮಾಡಿರುತ್ತಾರೆ. ಇದರಲ್ಲಿ ಖರೀದಿಸಿದ ಪರೀಕ್ಷಣಗಳ ಬಗ್ಗೆ ವಿವರಣೆ ನೀಡುವಂತೆ ತಿಳಿಸಲಾಗಿದೆ.
- ನಾಲ್ಕನೇ ತ್ರೈಮಾಸಿಕದಲ್ಲಿ ಬಿಡುಗಡೆಯಾದ ಅನುದಾನವನ್ನು ಕೂಡಲೇ ಖಜಾನೆಯಿಂದ ಸೆಳೆದು, ಆಯ್ಕೆಯಾದ ಶಾಲೆಗಳಿಗೆ ತಲಾ ರೂ.5000/- ದಂತೆ ಹಾಗೂ ಉಳಿಕೆ ರೂ.8,500/- ರಲ್ಲಿ 2014-15ನೇ ಸಾಲಿನಲ್ಲಿ ಆಯ್ಕೆ ಮಾಡಿರುವ ಶಾಲೆಗಳಿಗೆ ಪರೀಕ್ಷಣಗಳನ್ನು ಜೆರಾಕ್ಸ್ ಮಾಡಿಸಿ, ಮಕ್ಕಳಿಂದ ಉತ್ತರ ಪಡೆದು, ವಿಶ್ಲೇಷಣೆ ಮಾಡುವಂತೆ ಹಾಗೂ ಮಾರ್ಚ್ 2016 ರೊಳಗೆ ಪ್ರಗತಿ ವರದಿ ನೀಡುವಂತೆ ತಿಳಿಸಲಾಯಿತು.
- ಕಳೆದ ಸಾಲಿನ ಪರೀಕ್ಷಾ ವಿಶ್ಲೇಷಣೆ ಮಾಡಿರುತ್ತಾರೆ ಇದನ್ನು ತರಗತಿ ಪ್ರಕ್ರಿಯೆಯಲ್ಲಿ ಬಳಸಿಕೊಂಡರೆ ಉತ್ತಮವಾಗಿರುತ್ತದೆ. ಇದಕ್ಕೆ ಡಯಟ್ ಹಂತದಲ್ಲಿ ಕ್ರಿಯಾ ಯೋಜನೆ ರಚಿಸಿ, ಕಾರ್ಯಾಕ್ರಮವನ್ನು ಪರಿಣಾಮಕಾರಿಯಾಗಿ ಮುಂದುವರೆಸುವಂತೆ ತಿಳಿಸಲಾಯಿತು.
- ಶಾಲೆಗಳಿಗೆ ಚೆಕ್ ವಿತರಣೆ ಮಾಡಿರುವ ಬಗ್ಗೆ ರಿಜಿಸ್ಟರ್‌ನಲ್ಲಿ ಕ್ರಮಬದ್ಧವಾಗಿ ನಮೂದಿಸಿರುವುದಿಲ್ಲ. ನಿಯಮಾನುಸಾರ ವಿತರಿಸಲು ತಿಳಿಸಲಾಯಿತು.

**ವೆಬ್ ಆಧಾರಿತ ತರಬೇತಿ:**

- ಡಯಟ್ ಉಪನ್ಯಾಸಕರಿಗೆ ವೆಬ್ ಆಧಾರಿತ ತರಬೇತಿಗೆ ನಿಯೋಜಿಸುವುದು, ಹಾಗೂ ತರಬೇತಿ ಪಡೆದ ಉಪನ್ಯಾಸಕರು ಅದರ ಉಪಯೋಗವಾಗುತ್ತಿಲ್ಲ
- ಎಲ್.ಪಿ.ಓ ಮೂಲಕ ಕಡತಗಳ ಚಾಲನೆ ಮಾಡಲು ತಿಳಿಸಲಾಯಿತು.

**ಟೆಲಿ ಶಿಕ್ಷಣ:**

- ಟೆಲಿ ಶಿಕ್ಷಣಕ್ಕೆ ಸಂಬಂಧಿಸಿದಂತೆ ಡಯಟ್‌ನಲ್ಲಿ ನೋಡಲ್ ಅಧಿಕಾರಿಯನ್ನು ನೇಮಿಸಲು ತಿಳಿಸಲಾಯಿತು.
- ಟೆಲಿ ಶಿಕ್ಷಣ ಪ್ರಸಾರದಲ್ಲಿ ಬರುವ ಪ್ರಶ್ನೆ ಮತ್ತು ಉತ್ತರಗಳ ದಾಖಲೀಕರಣವಾಗಿರುವುದಿಲ್ಲ. ಶಿಕ್ಷಕರು ಶಾಲೆಗಳಲ್ಲಿ ದಾಖಲೀಕರಣ ಮಾಡಲು ತಿಳಿಸುವುದು.
- ಚಾಮರಾಜನಗರದಲ್ಲಿ ಟೆಲಿ ಶಿಕ್ಷಣ ಪ್ರಸಾರವಾಗುತ್ತಿರುವ 12 ಶಾಲೆಗಳಲ್ಲಿ ಇಂಟರ್‌ನೆಟ್ ಸೌಲಭ್ಯವಿರುವುದಿಲ್ಲವೆಂದು ತಿಳಿಸಿರುತ್ತಾರೆ. ಹಾಗೂ ಕೆಲವು ಚಟುವಟಿಕೆಗಳು ಮಕ್ಕಳಿಗೆ ಅರ್ಥವಾಗುವ ಮಟ್ಟದಲ್ಲಿ ಇಲ್ಲ ಎಂದು ತಿಳಿಸಿದ್ದು, ಇದನ್ನು ಸಂಬಂಧಪಟ್ಟವರ ಗಮನಕ್ಕೆ ತರಲು ತಿಳಿಸಲಾಗಿದೆ.

**ಎಜುಸ್ಯಾಟ್:**

- ಎಜುಸ್ಯಾಟ್ ಯೋಜನೆಯಡಿ ನೀಡಿರುವ ಉಪಕರಣಗಳು ಹಳೆಯದಾಗಿದ್ದು, ಅವುಗಳನ್ನು ರಿಪೇರಿ ಮಾಡಿಸಲು ಆಗುತ್ತಿಲ್ಲ ಹಾಗೂ ಅದರ ಸ್ಪೇರ್ ಪಾರ್ಟ್‌ಗಳು ಸಿಗುತ್ತಿಲ್ಲವೆಂದು ತಿಳಿಸಿರುತ್ತಾರೆ. ಶಾಲಾವಾರು ವಿವರವಾದ ಮಾಹಿತಿಯನ್ನು ಸಂಗ್ರಹಿಸಿ ಕಳುಹಿಸಲು ತಿಳಿಸಲಾಯಿತು.
- ಎಜುಸ್ಯಾಟ್ ಯೋಜನೆಯಡಿ ನೀಡಿರುವ ಉಪಕರಣಗಳಿಗೆ ತಮ್ಮ ಹಂತದಲ್ಲಿ ರಿಪೇರಿಯಾಗುವ ಉಪಕರಣಗಳಿಗೆ ಶಾಲಾ ಸಂಚಿತ ನಿಧಿಯನ್ನು ಉಪಯೋಗಿಸಿಕೊಳ್ಳಲು ಉಪನಿರ್ದೇಶಕರಿಂದ ಅನುಮತಿ ಪಡೆಯುವಂತೆ ತಿಳಿಸಲಾಯಿತು.
- ಚಾಮರಾಜನಗರ ಡಯಟ್‌ನಲ್ಲಿ ಕಂಪ್ಯೂಟರ್ ಲ್ಯಾಬ್‌ಗೆ ರೂ.2.50 ಲಕ್ಷಗಳ ಅನುದಾನದ ಅಗತ್ಯವಿದೆ ಹಾಗೂ ಬ್ಯಾಟರಿಗಳು ಹಾಳಾಗಿದ್ದು, ಇವುಗಳ ರಿಪೇರಿಗಾಗಿ ಅನುದಾನ ಬಿಡುಗಡೆಗೆ ಕೋರಿರುತ್ತಾರೆ. ಪ್ರಸ್ತಾವನೆಯನ್ನು ಡಿಎಸ್‌ಇಆರ್‌ಟಿಗೆ ಕಳುಹಿಸಲು ತಿಳಿಸಲಾಯಿತು.

**ಗ್ರಂಥಾಲಯ ವಿಭಾಗ: ಪ್ರಭಾ ಸುಧಾ ಫಡೆ ಗ್ರಂಥಪಾಲಕರು ಡಿಎಸ್‌ಇಆರ್‌ಟಿ.**

- ಡಯಟ್ ಗ್ರಂಥಾಲಯವನ್ನು ಟಾಟಾ ಇನ್‌ಸ್ಟಿಟ್ಯೂಟ್ ಆಫ್ ಸೈನ್ಸ್ ರವರು ಜಿಲ್ಲಾ ಶೈಕ್ಷಣಿಕ ಸಂಪನ್ಮೂಲ ಕೇಂದ್ರವನ್ನಾಗಿ ಮಾಡಿ, ಗ್ರಂಥಪಾಲಕರನ್ನು ನೇಮಿಸಿರುತ್ತಾರೆ. ಈ ಕೇಂದ್ರದಲ್ಲಿ ಪ್ರತಿ ದಿನ ಸುಮಾರು 100 ಜನರು ಈ ಕೇಂದ್ರದ ಪ್ರಯೋಜನ ಪಡೆಯುತ್ತಿದ್ದಾರೆ ಹಾಗೂ ಸದರಿ ಸಂಸ್ಥೆಯವರು 10,000 ಮಸ್ತಕಗಳು, ಟೀಚಿಂಗ್ ಗೈಡ್, ಟೀಚಿಂಗ್ ಮಾಡ್ಯೂಲ್‌ಗಳು, ಸೈನ್ಸ್ ಎಕ್ಯೂಪ್‌ಮೆಂಟ್ಸ್‌ಗಳಿದ್ದು, ಗ್ರಂಥಾಲಯದ ಅನುಪಾಲನೆ ಚೆನ್ನಾಗಿ ನಿರ್ವಹಿಸಿರುತ್ತಾರೆ.

- ಉಪನಿರ್ದೇಶಕರು(ಆ) ಚಾಮರಾಜನಗರರವರು ಇಲಾಖೆಯ ಎಲ್ಲಾ ಕಾರ್ಯಕ್ರಮಗಳ ಮೇಲ್ವಿಚಾರಣೆ ಮಾಡಿದ್ದಲ್ಲಿ ಕಾರ್ಯಕ್ರಮಗಳು ಹೆಚ್ಚು ಪರಿಣಾಮಕಾರಿಯಾಗುತ್ತದೆ ಎಂದು ಸಭೆಗೆ ತಿಳಿಸಿದರು ಈ ಬಗ್ಗೆ ಅಧೀನ ಅಧಿಕಾರಿಗಳು ಅವರ ತಾತ್ಕಾಲಿಕ ಪ್ರವಾಸ ಪಟ್ಟಿಯಲ್ಲಿ ನಿಗಧಿತ ಸಂಖ್ಯೆಯ ಶಾಲಾ ಭೇಟಿಗಳು ಇವೆಯೇ ಹಾಗೂ ಭೇಟಿ ಮಾಡಿದ್ದಾರೆಯೇ ಎಂಬ ಬಗ್ಗೆ ಖಾತ್ರಿಪಡಿಸಿಕೊಳ್ಳಲು ತಿಳಿಸಲಾಯಿತು. ಪ್ರತಿಯೊಬ್ಬರ ಟಿಪಿ/ಟಿಡಿಯನ್ನು ತಪ್ಪದೇ ಪ್ರಾಂಶುಪಾಲರು ಪ್ರತಿ ತಿಂಗಳು ಪರಿಶೀಲಿಸುವಂತೆ ತಿಳಿಸಲಾಯಿತು.
  ಅಭಿಪ್ರಾಯ:
- ಸಹನಿರ್ದೇಶಕರು ಸಿಟಿಇ ಮೈಸೂರು ವಿಭಾಗರವರು ಆ ಸಭೆಯಲ್ಲಿ ಚರ್ಚಿಸಿದ ಸಾರಾಂಶವನ್ನು, ಇಲಾಖೆಯ ಸೂಚನೆಯಂತೆ ತರಬೇತಿ ಗುರಿಯನ್ನು ಪೂರ್ಣಗೊಳಿಸಲು ಉಪನಿರ್ದೇಶಕರು(ಆ) ಹಾಗೂ ಬಿಇಓಗಳು ಕ್ರಮವಹಿಸಲು ತಿಳಿಸಲಾಯಿತು.
- ಉಪನಿರ್ದೇಶಕರು ಜಿಲ್ಲೆಯ ಶೈಕ್ಷಣಿಕ ಆಡಳಿತ ವಲಯ ಹಂತದಲ್ಲಿ ಹಾಗೂ ಕ್ಷೇತ್ರ ಶಿಕ್ಷಣಾಧಿಕಾರಿಗಳು ಕ್ಲಸ್ಟರ್ ಹಂತಕ್ಕೆ ಶೈಕ್ಷಣಿಕ ಸ್ಪಂದನ ಕಾರ್ಯಕ್ರಮವನ್ನು ಮಾಡಲು ಹಿರಿಯ ಸಹಾಯಕ ನಿರ್ದೇಶಕರು ತಿಳಿಸಿದರು.

ವಂದನೆಗಳೊಂದಿಗೆ ಸಭೆಯು ಮುಕ್ತಾಯವಾಯಿತು.

ನಿರ್ದೇಶಕರು,
ಶಿಕ್ಷಣ ಸಂಶೋಧನೆ ಮತ್ತು ತರಬೇತಿ ಇಲಾಖೆ,
ಬೆಂಗಳೂರು-85.

ಇವರಿಗೆ,

1) ಪ್ರಾಂಶುಪಾಲರು, ಡಯಟ್ ಚಾಮರಾಜನಗರ ಇವರಿಗೆ
2) ಉಪನಿರ್ದೇಶಕರು, ಸಾ.ಶಿ.ಇ, ಚಾಮರಾಜನಗರ ಜಿಲ್ಲೆ
3) ಚಾಮರಾಜನಗರ ಜಿಲ್ಲೆಯ ಎಲ್ಲಾ ಕ್ಷೇತ್ರ ಶಿಕ್ಷಣಾಧಿಕಾರಿಗಳಿಗೆ ಮತ್ತು ಎಲ್ಲಾ ಕ್ಷೇತ್ರ ಸಮನ್ವಯಾಧಿಕಾರಿಗಳಿಗೆ ಮುಂದಿನ ಕ್ರಮಕ್ಕಾಗಿ.

ಮಾಹಿತಿಗಾಗಿ

1) ಮಾನ್ಯ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು ರವರಿಗೆ.
2) ಮಾನ್ಯ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಕಲಬುರುಗಿ ರವರಿಗೆ
3) ಪ್ರಾಂಶುಪಾಲರು, ಸಿಟಿಇ ಮೈಸೂರುರವರಿಗೆ,